GULBARGA UNIVERSITY
"Jnana Ganga", GULBARGA - 585 106, Karnataka, India.
☎ 08472-263202
Fax 08472-263206
E-Mail: root@guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/ಪಿ.ಜಿ./2013-14/1046 ದಿನಾಂಕ 23.09.2013

## ಪ್ರವೇಶ ಅಧಿಸೂಚನೆ

ವಿಷಯ:- ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶ ನೀಡುವ ಬಗ್ಗೆ

ಉಲ್ಲೇಖ:- 1. ಈ ಕಚೇರಿ ಅಧಿಸೂಚನೆ ಸಂಖ್ಯೆ ಗುವಿಗು/ವಿಮವಿ/2013-14/980 ದಿನಾಂಕ 04.09.2013.
2. ಕುಲಪತಿಗಳ ಆದೇಶ ದಿನಾಂಕ 23.09.2013

ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ ಹಾಗೂ ವಿವಿಧ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ದಿನಾಂಕ 12.9.2013 ರ ಪ್ರವೇಶ ಪ್ರಕ್ರಿಯೆಯ ನಂತರ ಖಾಲಿ ಉಳಿದಿರುವ ಸೀಟುಗಳಿಗಾಗಿ, ಅಂತಿಮ ಸುತ್ತಿನ ಪ್ರವೇಶ ಪ್ರಕ್ರಿಯೆಯನ್ನು ದಿನಾಂಕ **27.09.2013** ರಂದು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರಗಳಲ್ಲಿ ಹಾಗೂ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಜರುಗಿಸಲಾಗುವುದು.

ಆಸಕ್ತ ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ ಹಾಗೂ ವಿವಿಧ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಖಾಲಿ ಉಳಿದಿರುವ ಸೀಟುಗಳ ಮಾಹಿತಿಯನ್ನು ಪಡೆಯಬಹುದು.

ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನ: ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಹೊಸದಾಗಿ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಅರ್ಜಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.gulbargauniversity.ac.nic.in ನಿಂದ ಡೌನಲೋಡ್ ಮಾಡಿಕೊಂಡು ನಿಗದಿತ ಶುಲ್ಕ ರೂ.450/- (ರೂ. 225/SC/ST & Cat-I) ಚಾಲನ್ ಅಥವಾ ಡಿ.ಡಿ.ಯನ್ನು ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ರವರ ಹೆಸರಿನಲ್ಲಿ ಪಡೆದು ಸಂಬಂಧಪಟ್ಟ ವಿಭಾಗ/ಮಹಾವಿದ್ಯಾಲಯಗಳಲ್ಲಿ ಸಲ್ಲಿಸುವುದು.

**27.09.2013** ರಂದು ಪ್ರವೇಶ ಪ್ರಕ್ರಿಯೆ ಜರುಗಲಿರುವ ವಿಭಾಗ/ಮಹಾವಿದ್ಯಾಲಯಗಳಲ್ಲಿ ಬೆಳಿಗ್ಗೆ ಸರಿಯಾಗಿ 10.30 ಗಂಟೆಗೆ ಹಾಜರಿರಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರಗಳ ವಿಶೇಷಾಧಿಕಾರಿಗಳು, ಹಾಗೂ ಸರ್ಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರನ್ನು ಸಂಪರ್ಕಿಸಬಹುದು.

23/9/13
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

1. ಎಲ್ಲಾ ವಿಭಾಗದ ಮುಖ್ಯಸ್ಥರು, ಸ್ನಾತಕೋತ್ತರ ಅಧ್ಯಯನ ವಿಭಾಗ, ಗು.ವಿ.ಗುಲಬರ್ಗಾ
2. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ ಬೀದರ ಹಾಗೂ ರಾಯಚೂರು
3. ಪ್ರಾಂಶುಪಾಲರು, ಸ್ನಾತಕೋತ್ತರ ಹೊಂದಿರುವ ಸರ್ಕಾರಿ ಮಹಾವಿದ್ಯಾಲಯಗಳು
4. ಅಧ್ಯಕ್ಷರು ಪಿ.ಜಿ.ಪ್ರವೇಶ ಸಮಿತಿ 2013-14, ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ
5. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು ಗು.ವಿ.ಗುಲಬರ್ಗಾ